ತಾಲ್ಲೂಕು	ಖರ್ಚಾದ ಹಣ ರೂ.
1) ಬೆಳಗಾಂ	54,221-00
2) ಖಾನಾಪುರ	47,850-00
3) ಹುಕ್ಕೇರಿ	56,550-00
4) ಗೊಕಾಕ್	15,135-00
5) ಬೈಲಹೊಂಗಲ	60,900-00
6) ಸವದತ್ತಿ	60,900-00
7) ರಾಮದುರ್ಗ	34,800-00
8) ಅಥಣಿ	65,250-00
9) ಚಿಕ್ಕೋಡಿ	78,300-00
10) ರಾಯಬಾಗ್	34,800-00
ಒಟ್ಟು ರೂ	**5,08,706-00**

ಬೆಳಗಾವಿ ಜಿಲ್ಲೆಯ ಎಲ್ಲಾ 117 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಒಟ್ಟು 8 ಹೆಚ್.ಐ.ವಿ. ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಪತ್ತೆ ಹಚ್ಚಲಾದ ರೋಗಿಗಳಿಗೆ ಸೂಕ್ತ ಚಿಕಿತ್ಸೆ, ಮಾರ್ಗದರ್ಶನ ಮತ್ತು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಸ್ವಸಹಾಯ ಸಂಘಗಳ ರಚನೆ

2760 (3244) ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಸಹಾಯ ಸಂಘಗಳ ರಚನೆಯ ಕುರಿತು ರಾಜ್ಯಾದ್ಯಂತ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿರುವ ಸ್ವಸಹಾಯ ಸಂಘಗಳೆಷ್ಟು?

ಇ) ಈ ಸ್ವಸಹಾಯ ಸಂಘಗಳಿಂದ ಸಾಧಿಸಿದ ಪ್ರಗತಿ ಏನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯು ದಿನಾಂಕ 1.4.99ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸ್ವಸಹಾಯ ಗುಂಪುಗಳ ರಚನೆಮತ್ತು ಆರ್ಥಿಕ ನೆರವು ನೀಡುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಸ್ವಸಹಾಯ ಸಂಘಗಳ ರಚಿಸುವಲ್ಲಿ ಸ್ವಯಂ ಸೇವಾ ಸಂಘಗಳು ಮತ್ತು ಬ್ಯಾಂಕುಗಳು ಹೆಚ್ಚಿನ ಆಸಕ್ತಿ ವಹಿಸುತ್ತಿವೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 879 ಸ್ವಸಹಾಯ ಸಂಘಗಳು ಆಸ್ತಿತ್ವದಲ್ಲಿರುತ್ತದೆ.

ಇ) ಬೆಳಗಾಂ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹೆಚ್ಚಿನ ಸ್ವಸಹಾಯ ಸಂಘಗಳ ರಚನೆ ಮಾಡಲಾಗಿದೆ. ಸ್ವಸಹಾಯ ಸಂಘಗಳ ಸದಸ್ಯರ ಉಳಿತಾಯಹಣವನ್ನು ಸಂಘಗಳ ಸದಸ್ಯರಿಗೆ ಸಾಲವಾಗಿ ನೀಡ

ಲಾಗುವುದು. 1999-2000ನೇ ಸಾಲಿನಲ್ಲಿ 171 ಸ್ವಸಹಾಯ ಸಂಘಗಳಿಗೆ ಸಹಾಯ ನೀಡಲು ಗುರಿಯನ್ನು ನಿಗದಿಪಡಿಸಲಾಗಿತ್ತು. ಈಗಾಗಲೇ 27 ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವುನೀಡಲಾಗಿದೆ ಮತ್ತು ಸಹಾಯ ಧನವನ್ನು ಬಿಡುಗಡೆ ಮಾಡಲಾಗಿದೆ. ಹೆಚ್ಚಿನ ಸ್ವಸಹಾಯ ಗುಂಪುಗಳು ಹೈನುಗಾರಿಕೆಯನ್ನು ಚಟುವಟಿಕೆಯನ್ನುತೆಗೆದು ಕೊಂಡಿದ್ದು, ಈ ಬಗ್ಗೆ ಅವರುಗಳಿಗೆ ತರಬೇತಿಯನ್ನು ಕೊಡಲಾಗಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವುದು.

2761 (3253) ಶ್ರೀ ಶಿವಪ್ಪ. ಬಿ.ಬಿ. (ಸಕಲೇಶಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಯಾವ ಯಾವ ಗ್ರಾಮಗಳಲ್ಲಿ ತೆರೆಯಲಾಗುತ್ತದೆ (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಸಕಲೇಪುರ ಆಸ್ಪತ್ರೆಗೆ ಔಷಧಿ ಖರೀದಿಸಲು ಅನುದಾನ ಬಿಡುಗಡೆ

2762 (3435) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಮತ್ತು ಸಕಲೇಶಪುರ ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿಗಳನ್ನು ಕೊಳ್ಳಲು ಕಳೆದ 2 ವರ್ಷಗಳಿಂದ ಎಷ್ಟು ಹಣವನ್ನುಕಾಯ್ದಿರಿಸಲಾಗಿತ್ತು.

ಆ) ಚಾಲ್ತಿ ಸಾಲಿನಲ್ಲಿ ಔಷಧಿಗಳನ್ನು ಖರೀದಿಸಲು ಅನುದಾನ ಕಡಿತ ಗೊಳಿಸಲಾಗಿದೆಯೆ;

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಇ) ಅನುದಾನ ಹೆಚ್ಚಿಸಲು ಯಾವ ಕ್ರಮ ಕೈ ಗೊಳ್ಳಲಾಗಿದೆ?

ಆಸ್ಪತ್ರೆ	98-99	99-2000
		(ಲಕ್ಷ ರೂ.ಗಳಲ್ಲಿ)
ಸಾ. ಆಸ್ಪತ್ರೆ ಸಕಲೇಶಪುರ	2.40	6.00
ಪ್ರಾ. ಆ ಕೇಂದ್ರ ಆಲೂರು	0.50	0.50